**ದಿನಾಂಕಃ 24.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಆರ್ ವಿ ಕೆ ವಕೀಲರಿಂದಃ-

ಕೆಲಗೆರೆ ಗ್ರಾಮದ ಸರ್ವೆ ನಂ.42 ರಲ್ಲಿ 192 ಎಕರೆ ಗೋಮಾಳದ ಜಮೀನು ಇದೆ. ಸರ್ವೆ ನಂ.42 ರಲ್ಲಿ ಅನಧಿಕೃತವಾಗಿ 5 ಎಕರೆ ಜಮೀನನ್ನು ವ್ಯವಸಾಯ ಮಾಡುತ್ತಿದ್ದರು ಎಂದು ತೋರಿಸಲು ತಮ್ಮ ಬಳಿ ಯಾವುದಾದಾರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ಆರ್ ಐ ಮತ್ತು ವಿ ಐ ರವರುಗಳು ನೀಡಿದ ವರದಿ ಇದೆ ಎನ್ನುತ್ತಾರೆ. ಸುಮಾರು ಎಷ್ಟು ವರ್ಷಗಳಿಂದ ತಮ್ಮತಂದೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿ 35 ವರ್ಷ ಎನ್ನುತ್ತಾರೆ. 35 ವರ್ಷಗಳಿಂದ ತಮ್ಮ ತಂದೆ ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದು ತೋರಿಸಲು ಮಂಜೂರಾತಿ ಪತ್ರ ಇದೆಯಾ ಎಂದರೆ ಸಾಕ್ಷಿಯು ರಾಜಕೀಯ ದುರುದ್ದೇಶದಿಂದ ನನ್ನ ತಂದೆಯ ಹೆಸರಿಗೆ ಮಂಜೂರಾತಿ ಪತ್ರ ಕೊಡಲು ಬಿಟ್ಟಿಲ್ಲ ಎನ್ನುತ್ತಾರೆ. 5 ಎಕರೆ ಜಮೀನಿನಲ್ಲಿ ತಮ್ಮ ತಂದೆ ಸ್ವಾಧೀನ ಇದ್ದರು ಎಂದು ತೋರಿಸಲು ಸಂಬಂಧಪಟ್ಟ ಪ್ರಾಧೀಕಾರದ ಮುಂದೆ ಅರ್ಜಿ ಸಲ್ಲಿಸಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ದಾಖಲೆ ಕಳೆದು ಹೋಗಿದೆ ಎನ್ನುತ್ತಾರೆ. ನನ್ನ ತಂದೆ 2001 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಸತ್ತ ನಂತರ ಸದರಿ 5 ಎಕರೆ ಜಮೀನನ್ನು ಮಂಜೂರು ಮಾಡಿಕೊಡುವಂತೆ ತಾವೇನಾದರೂ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನಾನು ನನ್ನ ತಾಯಿ ಮತ್ತು ನನ್ನ ಹೆಂಡತಿ ಅರ್ಜಿ ಸಲ್ಲಿಸಿರುತೇವೆ. ತಮ್ಮ ಮತ್ತು ತಮ್ಮ ಹೆಂಡತಿಯ ಹೆಸರಿಗೆ ತಲಾ 2 ಎಕರೆ ಮತ್ತು ತಮ್ಮ ತಾಯಿಯ ಹೆಸರಿಗೆ 1 ಎಕರೆಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2001 ನೇ ಇಸವಿಯಿಂದ ಇವತ್ತಿನವರೆಗೂ ನನ್ನ ಹಾಗೂ ನನ್ನ ಹೆಂಡತಿಯ ಮತ್ತು ನನ್ನ ತಾಯಿಯ ಹೆಸರಿಗಾಗಲೀ ಮಂಜೂರಾತಿ ಪತ್ರ ಕೊಟ್ಟಿಲ್ಲ ಎಂದರೆ ಸರಿ.

ಪ್ರತಿವಾದಿಯರಿಗೆ ನಾಗವಾರ ಗ್ರಾಮದ ಸರ್ವೆ ನಂ.181/ಪಿ 38 ರಲ್ಲಿ ಶಿವಲಿಂಗಯ್ಯ ರವರಿಗೆ 2 ಎಕರೆ 20 ಗುಂಟೆ 1980-1981 ರಲ್ಲಿ ಮಂಜೂರಾಗಿದೆ ಎಂದರೆ ಸರಿ. 2ನೇ ಪ್ರತಿವಾದಿಯ ಗಂಡ ಗಿರಿಯಪ್ಪರವರಿಗೂ ಅದೇ ಸರ್ವೆ ನಂಬರ್ ನಲ್ಲಿ 1 ಎಕರೆ 4 ಗುಂಟೆ ಜಮೀನು ಮಂಜೂರಾಗಿದೆ ಎಂದರೆ ಸರಿ. ಸದರಿಯವರೇ ಸದರಿ ಸರ್ವೆ ನಂಬರ್ ವಿಸ್ತೀರ್ಣದ ಆಸ್ತಿಯಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿಯ ಬೇರೆಯವರು ಸ್ವಾ ಧೀನ ಇರುತ್ತಾರೆ ಎನ್ನುತ್ತಾರೆ. ತಾಲ್ಲೂಕು ಕಛೇರಿಯಲ್ಲಿ ಪ್ರತಿವಾದಿ 1 ರಿಂದ 4 ರವರಿಗೆ ಸರ್ಕಾರದಿಂದ ಕಟ್ಟಿಸಿಕೊಳ್ಳಬೇಕಾದ ಕಿಮ್ಮತ್ತನ್ನು ಕಟ್ಟಿಸಿಕೊಂಡು ಅವರ ಹೆಸರಿಗೆ ಖಾತೆ ಮಾಡಿರುತ್ತಾರೆಂದರೆ ಸರಿ. 2 ಎಕರೆ 20 ಗುಂಟೆಗೆ ಶಿವಲಿಂಗಯ್ಯರವರ ಹೆಸರು ಅವರ ಪೌತಿಯಾದ ನಂತರ 3 ನೇ ಪ್ರತಿವಾದಿ ವೆಂಕಟಲಕ್ಷ್ಮಮ್ಮ ರವರಿಗೆ ಖಾತೆ ನಮೂದಾಗುತ್ತಾ ನಿಪಿ 15 ರಂತೆ ಬರುತ್ತಿರುತ್ತದೆ ಎಂದರೆ ಸರಿ. ನಿಪಿ 4 ರಲ್ಲಿ ಸ್ವಾಧೀನ ಇರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗ ರವರುಗಳು ದಾವಾ ಆಸ್ತಿಯಲ್ಲಿ ನಾನು ಅಕ್ರಮವಾಗಿ ಅನಧಿಕೃತವಾಗಿ ಸ್ವಾಧೀನ ಇರುತ್ತೇನೆ ಎಂದು ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ 7 ಮತ್ತು 8ರಲ್ಲಿ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ.

ತಾಲ್ಲೂಕು ದಂಡಾಧಿಕಾರಿ, ಚನ್ನಪಟ್ಟಣ ಇವರು ನನ್ನ ಮತ್ತು ಸಹೋದರರ ಮೇಲೆ ಎಂ ಕೆ ದೊಡ್ಡಿ ಠಾಣೆಯಲ್ಲಿ ಪಿರ್ಯಾದು ನೀಡಿದ್ದು ಅದರ ಸಂಬಂಧ ಎಂ ಕೆ ದೊಡ್ಡಿ ಪೋಲೀಸ್ ಠಾಣಾ ಸಿ ಆರ್ ನಂ. 141/2020 ಎಂದು ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಪ್ರಕರಣ ದಾವಾ ಸಂಬಂಧ ಅಲ್ಲ ಎನ್ನುತ್ತಾರೆ. ಕೆಲಗೆರೆ ಗ್ರಾಮದ ಸರ್ವೆ ನಂ.61 ಜಮೀನು ಬೆಟ್ಟ ಗುಡ್ಡ, ಮರ ಗಿಡ ಕಲ್ಲು ಬಂಡೆ ನೈಸರ್ಗಿಕವಾಗಿ ಇರುವುದನ್ನು ಜೆ ಸಿ ಬಿ ಯಿಂದ ಅದನ್ನು ತೆರವು ಮಾಡಿ ಹಾಳು ಮಾಡಿರುತ್ತೇವೆ ಎಂದು ತಾಲ್ಲೂಕು ದಂಡಾಧಿಕಾರಿಗಳು ನನ್ನ ಮತ್ತು ನನ್ನ ಸಹೋದರರ ಮೇಲೆ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗೋಮಾಳದಲ್ಲಿ ಒಂದು ಪುಟ್ಟ ಕೆರೆ ಇದ್ದು, ಅದನ್ನು

ಮುಚ್ಚಿ ಹಾಕಿರುತ್ತೇನೆ ಎಂದು ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ ದಾವಾ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ